# ನಾಲಿಗೆ

ಮೊದಲು
ಇಷ್ಟೊಂದು ಉದ್ದವಿರಲಿಲ್ಲ!

ಅದು ಹೇಗಾಯಿತು
ಇಷ್ಟೊಂದು ಉದ್ದ
ತೆಳು ಮತ್ತು ಚೂಪು?

ಚಾಕುವಿನಂತೆ ಹರಿತ?

ನೀವು ಹೇಳಿದ ಮೇಲೆ
ಮೌನವಾಗಿಯೇ ಇರಬೇಕಿತ್ತು
ನಿಮ್ಮ ಆದೇಶ ಜಾರಿಯಾದ ನಂತರ
ಮಾತಗಳೇ ನಿಂತು ಬಿಡಬೇಕಿತ್ತು
ಆದರೆ ಏಕೆ ಸುಮ್ಮನಾಗುತ್ತಿಲ್ಲ?
ನಿಮಗೇನಾದರೂ ಗೊತ್ತಾ?



ಕಲೆ: ನಂಜುಂಡಸ್ವಾಮಿ

ನಿಮ್ಮ ಮೇಲುಸ್ತುವಾರಿಯಲ್ಲಿ
ನಿರಂತರವಾದ
ನಿಮ್ಮ ಆಳ್ವಿಕೆಯಲ್ಲಿಯೂ ಸಹ
ಗಂಟಲಿನಾಳದಿಂದ ಹಲ್ಲಿನ ಬೇರಿನತನಕ ಹಬ್ಬಿದ
ಗಡಿರೇಖೆಯನ್ನೂ ಮೀರಿ
ತಲುಪಿದೆ ಅದರ ದನಿ
ನ್ಯಾಯಾಲಯದ ತನಕ
ಪೊಲೀಸ್ ಠಾಣೆಯ ತನಕ
ತಳಾತಳದ ಅಡ್ಡೆಯ ತನಕ

ಮೆರವಣಿಗೆಯಲ್ಲಿ
ಸಭೆ ಸಮಾರಂಭಗಳಲ್ಲಿ

ಅಂತಿಮವಾಗಿ ತಲುಪಿದೆ ಅದು
ಸಂಸತ್ತಿನಲ್ಲಿ

ಜೀವವಿಜ್ಞಾನಿಗಳು ಕೂಡ ಆಘಾತಕ್ಕೊಳಗಾಗಿದ್ದಾರೆ
ಹೇಗೆ ಬದಲಾಯಿತೆಂದು
ಅದರ ರೂಪ
ಅದರ ಆಕಾರ
ಮತ್ತದರ ಠಿಕಾಣಿ!

ಬಣ್ಣಗೆಟ್ಟಿದೆ ನಿಮ್ಮ ಮುಖ
ಕೆನ್ನೆಯ ಮೇಲಿನ ಹೊಳಪು ಎಲ್ಲಿ ಹಾರಿ
ಹೋಯಿತು?
ನೋಡಲು ಲಾಯಕ್ಕಾಗಿದೆ
ನೀವು ಭಯಭೀತರಾಗಿ ಬಡಬಡಿಸುತ್ತಿರುವ ದೃಶ್ಯ!

ನಿಜಕ್ಕೂ ನಿಮಗೆ ಹೆದರಿಕೆಯಾಗುತ್ತಿದೆಯೇ?
ಈ ನಿರಾಯುಧ ನಾಲಿಗೆಯ ದೆಸೆಯಿಂದ?

ಹೆದರಬೇಡಿ ಈಗ
ನಾಲಿಗೆ ನಾಲಿಗೆಯಾಗಿ ಉಳಿದಿಲ್ಲ
ಈಗದು ಪಂಚೇಂದ್ರಿಯವೂ ಅಲ್ಲ
ಕೇವಲ ಒಂದು ಮೂಕ ಇಂದ್ರಿಯವಷ್ಟೇ

ಹೌದು
ಇದುವೇ ಸತ್ಯ!